# ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.,

## MC No. 35/2022

**RW** : 1

**ದಿನಾಂಕಃ 18.10.2025ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಶ್ರೀ D.K. ವಕೀಲರಿಂದಃ**

ನಾನು ಈ ದಾವೆಯಲ್ಲಿ ಎದುರುದಾರನಾಗಿದ್ದು, ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ. ನಾನು ಅದಕ್ಕೆ ಓದಿ ನೋಡಿ ತಿಳಿದುಕೊಂಡು ಸಹಿ ಹಾಕಿರುತ್ತೇನೆ. ನಾನು ನನ್ನ ದಾವೆಯ ಪರವಾಗಿ ಕೆಳಕಂಡ ದಾಖಲಾತಿಗಳನ್ನು ಹಾಜರುಮಾಡಿರುತ್ತೇನೆ.

ಅವುಗಳನ್ನು ಈ ರೀತಿ ಗುರುತಿಸಲಾಯಿತು.

| | |
|---|---|
| ನಿಆರ್.1 | ತುಳುವಿನಲ್ಲಿರುವ 15 ಮೆಸೇಜ್ ಗಳು ಮತ್ತು ಅವುಗಳ ಕನ್ನಡ ಅನುವಾದ |
| ನಿಆರ್.2 | 2 ಮೊಬೈಲ್ ರೀಚಾರ್ಜ್ ರಶೀದಿಗಳು |
| ನಿಆರ್.3 | ಪೇಸ್ ಬುಕ್ ಮೆಸೇಜ್ ಗಳು |
| ನಿಆರ್.4 | ದಿಃ07.08.2022 ರಂದು ಎದುರುದಾರರು ಅರ್ಜಿದಾರರಿಗೆ ಬರೆದ ಪತ್ರದ ಪ್ರತಿ |
| ನಿಆರ್.5 | ಎಲ್ಲಾ ಇಲೆಕ್ಟ್ರಾನಿಕ್ ದಾಖಲಾತಿಗಳ ಸಿಡಿ, ರಶೀದಿ ಮತ್ತು 65(ಬಿ) ಪ್ರಮಾಣಪತ್ರ |

**ಪಾಟೀಸವಾಲು ಅರ್ಜಿದಾರರ ಪರ ಶ್ರೀ.ಎಸ್.ಕೆ. ವಕೀಲರಿಂದಃ**

ಮದುವೆಯಾದ 1 ತಿಂಗಳ ನಂತರ ಬೆಂಗಳೂರಿಗೆ ನನ್ನ ಕರ್ತವ್ಯದ ಮೇಲೆ ಹೋಗಿರುತ್ತೇನೆ. 2013 ರ ಮೇ 27 ರಿಂದ 29 ರವರೆಗೆ ಅರ್ಜಿದಾರರು ಯಾವುದಾದರೂ ಆಸ್ಪತ್ರೆಯಲ್ಲಿ ದಾಖಲಾದ ಬಗ್ಗೆ ನನಗೆ ಮಾಹಿತಿ ಇದೆಯೇ ಎಂದರೆ ಮನೆಯಲ್ಲಿ ಹೇಳಿ ಗೊತ್ತಾಯಿತು ಎನ್ನುತ್ತಾರೆ. ಮೇ 27 ರ ರಾತ್ರಿ ನಾನು ಬೆಂಗಳೂರಿಗೆ ಹೋಗಿರುತ್ತೇನೆ. ಸದರಿ

ದಿನದ ಮಧ್ಯಾಹ್ನ ಅರ್ಜಿದಾರರು ಮಹಾವೀರ ಆಸ್ಪತ್ರೆಯಲ್ಲಿ ದಾಖಲಾದ ಬಗ್ಗೆ ಅದರ ಮರುದಿನ ಮಾಹಿತಿ ತಿಳಿಯಿತು. ನಾನು ಬೆಂಗಳೂರಿಗೆ ಹೋಗುವವರೆಗೆ ಅರ್ಜಿದಾರರು ನಮ್ಮ ಮನೆಯಲ್ಲಿಯೇ ಇದ್ದರು. ನನಗೆ ಮಾಹಿತಿ ಗೊತ್ತಾದಾಗ ನಾನು ಬೆಂಗಳೂರಿನಿಂದ ಹಿಂದೆ ಬರಲು ಪ್ರಯತ್ನಿಸಿರುತ್ತೀರಾ ಎಂದರೆ ನಾನು ಅರ್ಜಿದಾರರಿಗೆ ಕರೆ ಮಾಡಿರುತ್ತೇನೆ, ನನ್ನ ತಂಗಿಯನ್ನೂ ಆಸ್ಪತ್ರೆಗೆ ಕಳುಹಿಸಿದ್ದೆ ಎನ್ನುತ್ತಾರೆ. ಸದರಿ ಆಸ್ಪತ್ರೆಯ ವೆಚ್ಚವನ್ನು ಪಾವತಿಸಲು ನಾನು ಮುಂದಾದಾಗ ಒಂದೇ ದಿನ ಮಾತ್ರ ದಾಖಲಾಗಿದ್ದು, ಹೆಚ್ಚು ಖರ್ಚಾಗಿರುವುದಿಲ್ಲ ನಾವೇ ಕೊಡುತ್ತೇವೆ ಎಂದು ಹೇಳಿರುತ್ತಾರೆ. ಆಸ್ಪತ್ರೆಯಲ್ಲಿ ದಾಖಲಾದ ಬಗ್ಗೆ ನನಗೆ ಮಾಹಿತಿ ಬರುವಾಗ ಅರ್ಜಿದಾರರು ಇನ್ನೂ ಕೂಡಾ ಆಸ್ಪತ್ರೆಯಲ್ಲಿಯೇ ಇದ್ದರು. ನಾನು ಕಾನೂನು ವಿದ್ಯಾಭ್ಯಾಸವನ್ನು ಮುಗಿಸಿ 2002 ನೇ ಇಸವಿಯಲ್ಲಿ ಕಾನೂನು ವೃತ್ತಿಯನ್ನು ಆರಂಭಿಸಿದ್ದೆನು. ಸದರಿ ಪ್ರಾಕ್ಟೀಸ್ ನ್ನು ನಾನು ಬೆಂಗಳೂರಿನಲ್ಲಿ ಶುರು ಮಾಡಿದ್ದೆ. ಆ ಸಮಯ ನನಗೆ ಉಳಿದುಕೊಳ್ಳಲು 2002 ರಿಂದ 2010 ರವರೆಗೆ ನಾನು ನನ್ನ ಸ್ನೇಹಿತರೊಂದಿಗೆ ರೂಮ್ ನಲ್ಲಿ ಇದ್ದೆ. 2010 ರಿಂದ 2012ರವರೆಗೆ ಬೆಂಗಳೂರಿನಲ್ಲಿ ಉಳಿದುಕೊಳ್ಳಲು ರಾಜಾಜಿನಗರದಲ್ಲಿ ಸಿಂಗಲ್ ರೂಮ್ ಮಾಡಿಕೊಂಡು ಒಬ್ಬನೇ ಇದ್ದೆ. 2012 ಇಲ್ಲಿಯವರೆಗೆ ಗುಟ್ಟಳ್ಳಿಯಲ್ಲಿ ಅದೇ ಕಟ್ಟಡದಲ್ಲಿ ವಾಸವಿದ್ದು, ಈ ಹಿಂದೆ 1BHK ಇದ್ದು, ಈಗ ಸಿಂಗಲ್ ರೂಮ್ ನಲ್ಲಿ ಇದ್ದೇನೆ. ನಾನು ಬೆಂಗಳೂರಿನಲ್ಲಿ ಇರವಾಗ ವಿವಾಹದ ನಂತರ ನಾನು ಮತ್ತು ನನ್ನ ಹೆಂಡತಿಗೆ ವಾಸಯೋಗ್ಯ ಮನೆಯನ್ನು ನೋಡಿರುತ್ತೇನೆ, ಮನೆಗೆ ಬೇಕಾದ ವಸ್ತುಗಳನ್ನೆಲ್ಲ ಖರೀದಿಸಿರುತ್ತೇನೆ. 2012 ಕ್ಕಿಂತ ಮುಂಚೆ ನನ್ನ ಮನೆಯಲ್ಲಿ ಫ್ರಿಜ್, ವಾಷಿಂಗ್ ಮಷಿನ್ ಇರಲಿಲ್ಲವಾ ಎಂದರೆ ನನ್ನ ಬಳಿ ಮಿಕ್ಸಿ ಮಾತ್ರ ಇತ್ತು. ಗುಟ್ಟಳ್ಳಿಯ ಮನೆಗೆ ನಾನು ನನ್ನ ಅರ್ಜಿದಾರರನ್ನು ಕರೆದುಕೊಂಡು ಹೋಗಿರುತ್ತೀರಾ ಎಂದರೆ ನಾನು ಬರುವಂತೆ ಹೇಳಿರುತ್ತೇನೆ, ಅವರು ಬಂದಿರುವುದಿಲ್ಲ. ಸದರಿ ಮನೆಯ ವಿಳಾಸವನ್ನು ನಾನು ಅರ್ಜಿದಾರರಿಗೆ ಹೇಳಿರುತ್ತೇನೆ. ಇಲ್ಲಿಯವರೆಗೆ ಪಿರ್ಯಾಧಿದಾರರು, ಅವರ ಮನೆಯವರು, ಸಂಬಂಧಿಕರಾಗಲೀ ಗುಟ್ಟಳ್ಳಿಯ

ಮನೆಗೆ ಬಂದಿರುತ್ತಾರಾ ಎಂದರೆ ಬರಲಿಕ್ಕೆ ಹೇಳಿರುತ್ತೇನೆ, ಬಂದಿರುವುದಿಲ್ಲ ಎನ್ನುತ್ತಾರೆ. ಅರ್ಜಿದಾರರಿಗೆ ಈವರೆಗೆ ನಾನು ನನ್ನ ವಿಳಾಸವನ್ನೇ ತಿಳಿಸಿಲ್ಲ ಎಂದರೆ ಸರಿಯಲ್ಲ.

ವಿವಾಹ ನಂತರ ಅರ್ಜಿದಾರರು ಬೆಂಗಳೂರಿಗೆ ಬಂದಿದ್ದರು ಆದರೆ ಬಂದ ವಿಚಾರವನ್ನು ನನಗೆ ತಿಳಿಸಿರಲಿಲ್ಲ. ಅವರು ಬಂದಿದ್ದ ವಿಷಯ ನನಗೆ ಅವರ ಅಕ್ಕನ ಮಗನ ಹುಟ್ಟು ಹಬ್ಬದ ಆಚರಣೆಗೆ ನನ್ನನ್ನು ಕರೆದಿದ್ದು, ನಾನು ಅಲ್ಲಿ ಹೋದಾಗ ಅರ್ಜಿದಾರರು ಕೂಡಾ ಇದ್ದದ್ದರಿಂದ ಗೊತ್ತಾಯಿತು. ಆಗ ನಾನು ಅರ್ಜಿದಾರರಿಗೆ ನನ್ನ ಮನೆಗೆ ಬಂದು 2 ದಿನ ಇದ್ದು ಹೋಗುವಂತೆ ಹೇಳಿರುತ್ತೇನೆ, ಆದರೆ ಅವರು ಬಂದಿರುವುದಿಲ್ಲ. ಅರ್ಜಿದಾರರು ಹುಟ್ಟು ಹಬ್ಬ ಆಚರಿಸುವ ದಿನದಂದೇ ಬೆಳಿಗ್ಗೆ ಬಂದು ಮರುದಿನ ಬೆಳಿಗ್ಗೆ ಹೊರಟು ಹೋಗಿರುತ್ತಾರೆ. ನಾನು ಅರ್ಜಿದಾರರು, ಅವರ ಕುಟುಂಬಸ್ಥರನ್ನು ನಮ್ಮ ಮನೆಗೆ ನಾನು ಬೇರೆಯವರೊಂದಿಗೆ ಸದರಿ ಮನೆಯನ್ನು ಶೇರ್ ಮಾಡುತ್ತಿದ್ದುದ್ದರಿಂದಕರೆದುಕೊಂಡು ಬಂದಿರುವುದಿಲ್ಲ ಎಂದರೆ ಸರಿಯಲ್ಲ.

ನನಗೆ ನನ್ನ ಹೆಂಡತಿಯನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿ ಅಲ್ಲಿ ಸಂಸಾರ ಮಾಡುವ ಯಾವುದೇ ಇಚ್ಛೆ ಇರಲಿಲ್ಲ ಎಂದರೆ ಸರಿಯಲ್ಲ. ಗೋವಾಕ್ಕೆ 2015 ರಲ್ಲಿ ಅರ್ಜಿದಾರರೊಂದಿಗೆ ಹೋಗಿರುತ್ತೇನೆ. ಕೊಲ್ಲೂರು, ಮದ್ದೂರಿಗೆ ಯಾವಾಗ ಹೋಗಿರುತ್ತೇನೆ ಎಂದು ಗೊತ್ತಿಲ್ಲ. ವಿವಾಹವಾದ ನಂತರ ಅರ್ಜಿದಾರರನ್ನು ದೇವಸ್ಥಾನಕ್ಕೆ ಮಾತ್ರ ಕರೆದುಕೊಂಡು ಹೋಗಿರುತ್ತೇನೆ. ಯಾವುದೇ ರೀತಿ ಟ್ರಿಪ್ ಗೆ ಕರೆದುಕೊಂಡು ಹೋಗಿರುವುದಿಲ್ಲ. ಅವರು ರಜೆ ಹಾಕಲು ಒಪ್ಪುತ್ತಿರಲಿಲ್ಲ. ಮದುವೆಯಾಗಿ 15 ದಿನಗಳೊಳಗೆ ನಾನು ಬೆಂಗಳೂರಿಗೆ ಹೋಗಿಯಾಗಿದೆ ಎಂದರೆ ಸರಿಯಲ್ಲ. ಆ ಕಾರಣ ನಾನು ಅರ್ಜಿದಾರರನ್ನು ಎಲ್ಲಿಯೂ ಟ್ರಿಪ್ ಗೆ ಕರೆದಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಬೆಂಗಳೂರಿಗೆ ಬರುವಾಗ ಅರ್ಜಿದಾರರಿಗೆ ಮೆಸೇಜ್ ಕಳುಹಿಸುತ್ತಿದ್ದೆ. ಬೆಂಗಳೂರಿಗೆ ತಲುಪಿದ ತಕ್ಷಣ ಕೂಡಾ ಮೆಸೇಜ್ ಕಳುಹಿಸುತ್ತಿದ್ದೆ. ಆ ಸಂಬಂಧ ನಿಆರ್–1 ರಲ್ಲಿ ಯಾವುದೇ ಮೆಸೇಜ್ ಗಳು ಇರುವುದಿಲ್ಲ. ನಿಆರ್–1

2018 ರ ನಂತರದ್ದಾಗಿರುತ್ತದೆ. ಅರ್ಜಿದಾರರಿಗೆ ಮೆಸೇಜ್ ತಲುಪಿದೆಯೇ, ಅವರು ಅದನ್ನು ನೋಡಿದ್ದಾರೆಯೇ ಎಂದು ನನಗೆ ಹೇಳಲಾಗುವುದಿಲ್ಲ. ರಿಪ್ಲೈ ಮಾಡಿರುವುದಿಲ್ಲ. ಆ ಸಂಬಂಧ ನಾನು ಮೆಸೇಜ್ ಕಳುಹಿಸಿರುವುದಿಲ್ಲ, ಫೋನ್ ಮಾಡಿರುತ್ತೇನೆ. ಮೆಸೇಜ್ ನ್ನು ಕನ್ನಡಕ್ಕೆ ಅನುವಾದ ಮಾಡಿದವರು ಬೆಂಗಳೂರಿನವರು. ಸಾಮಾನ್ಯವಾಗಿ ಯಾವುದೇ ದಾಖಲೆಯನ್ನು ಅನುವಾದಿಸಿದರೆ, ಸದರಿ ದಾಖಲೆಯ ಕೆಳಗೆ ಪ್ರಮಾಣಪತ್ರ ಹಾಕಬೇಕು ಎಂದರೆ ಗೊತ್ತಿಲ್ಲ. ಮೊಬೈಲ್ ರೀಚಾರ್ಜ್ ಮಾಡಲು ಅರ್ಜಿದಾರರು ನನ್ನನ್ನು ಕೇಳಿಕೊಂಡಿರುವುದಿಲ್ಲ.

ಸುಳ್ಳು ಹೇಳಲಿಕ್ಕೆ ನಾಚಿಕೆಯಾಗುವುದಿಲ್ಲವಾ ಎಂದು ಅರ್ಜಿದಾರರು ಮೆಸೇಜ್ ಮಾಡಿದ್ದಕ್ಕೆ ನಾನು ಏನು ಎಂದು ಕೇಳಿ ಮೆಸೇಜ್ ಮಾಡಿರುವುದಿಲ್ಲ, ಕರೆ ಮಾಡಿರುತ್ತೇನೆ. SDA ಹುದ್ದೆಗಳ ಬಗ್ಗೆ ಅಡ್ವರ್ಟೈಸ್ ಮೆಂಟ್ ನ್ನು ನಾನು ಅರ್ಜಿದಾರರ ತಂಗಿಗೆ ಸಹಾಯವಾಗಲು ಕಳುಹಿಸಿರುತ್ತೇನೆ. ಸದರಿ ಮೆಸೇಜ್ ಗಳನ್ನು ಓದಿದ್ದಾರೆ ಎಂದು ಹೇಳಲು ಯಾವುದೇ ಕುರುಹು ಕಂಡುಬರುವುದಿಲ್ಲ ಎಂದರೆ message delivered ಎಂದು ತೋರಿಸುತ್ತದೆ ಎನ್ನುತ್ತಾರೆ. ನಿಆರ್ 1 ರಂತೆ ಇರುವ ಮೆಸೇಜ್ ಗಳಲ್ಲಿ ನಾನು ಮತ್ತು ಅರ್ಜಿದಾರರು ಒಟ್ಟಿಗೆ ಇರಬೇಕು ಎಂದು ಕಾಣಿಸುತ್ತದೆಯಾ ಎಂದರೆ ಆ ರೀತಿ ಒಂದು ಮೆಸೇಜ್ ಇದೆ. ಗೋವಾದಲ್ಲಿ ಇದ್ದ ಉಷಾ ಆಗಿರಬೇಕೆಂದು ನಾನು ಒಂದು ಮೆಸೇಜ್ ಮಾಡಿರುತ್ತೇನೆ ಎಂದರೆ ಸರಿ. 2015 ರಲ್ಲಿ ನೋಡಿದಂತಹ ಉಷಾರವರನ್ನು ನಾನು ಅದರ ನಂತರ ನೋಡಿರುವುದಿಲ್ಲವಾ ಎಂದರೆ ನಾನು ಆ ಕ್ಷಣವನ್ನು ಜ್ಞಾಪಿಸಿದ್ದೆ ಎನ್ನುತ್ತಾರೆ. ನಾನು 2018 ರ ನಂತರ ಮಂಗಳೂರಿಗೆ ಬರುವಾಗ ಸಂದೇಶವನ್ನು ಕಳುಹಿಸಿರುವುದಿಲ್ಲ.

ಇಂಟರ್ ಡಿಸ್ಟ್ರಿಕ್ ವರ್ಗಾವಣೆಗೆ ಸ್ಪೌಸ್ ಗ್ರೌಂಡ್ ಮೇಲೆ ಮದುವೆ ನೊಂದಣಿ ಪತ್ರ ಬೇಕು ಎಂದರೆ ನನಗೆ ಗೊತ್ತಿಲ್ಲ. ನಾವು ಮದುವೆಯನ್ನು ನೊಂದಣಿ ಮಾಡಿಸಿರುವುದಿಲ್ಲ. ಹಬ್ಬ ಹರಿದಿನಕ್ಕೆ ನಾನು ಇಲ್ಲಿಗೇ ಬರುತ್ತಿದ್ದೆ. ಅರ್ಜಿದಾರರೊಂದಿಗೆ ಹಬ್ಬವನ್ನು ಆಚರಿಸಿದ ಬಗ್ಗೆ ಯಾವುದೇ ಛಾಯಾಚಿತ್ರಗಳು ಇರುವುದಿಲ್ಲ. ವೈವಾಹಿಕ ಸಂಬಂಧಗಳಲ್ಲಿ ಕಲಹ ಬಂದಾಗ ಗಂಡಿನ

ಕಡೆಯವರು ಯಾವ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಬಹುದು ಎಂಬ ಬಗ್ಗೆ ನನಗೆ ಮಾಹಿತಿ ಇದೆ. ಕೌಂಟರ್ ಕ್ಲೇಮ್ ಆಗಿ ರೆಸ್ಟಿಟ್ಯೂಶನ್ ನ್ನು ಬಿಟ್ಟರೆ ಬೇರೆ ಕಾನೂನು ಕ್ರಮ ಯಾಕೆ ತೆಗೆದುಕೊಂಡಿಲ್ಲ ಎಂದರೆ ನಾವು ರಾಜಿ ಪಂಚಾಯ್ತಿ ಮಾಡುತ್ತಿದ್ದೆವು ಎನ್ನುತ್ತಾರೆ. 2018 ರಲ್ಲಿ ಅರ್ಜಿದಾರರು ನಮ್ಮ ಮನೆ ಬಿಟ್ಟು ಹೋದಾಗಿನಿಂದ 2022 ರಲ್ಲಿ ಈ ಅರ್ಜಿದಾಖಲಾಗುವವರೆಗೆ ನಾನು ಯಾವುದೇ ವಕೀಲರ ನೋಟೀಸು ಕಳುಹಿಸಿರುವುದಿಲ್ಲ. ಯಾವುದೇ ರೀತಿಯ ಕೌನ್ಸೆಲಿಂಗ್ ನ್ನು ಮಾಡಿರುವುದಿಲ್ಲ. ನಾನು ಕಳುಹಿಸಿದ ಮೆಸೇಜ್ ಗಳನ್ನು ಅರ್ಜಿದಾರರು ನೋಡುವುದಿಲ್ಲ ಎಂದು ಗೊತ್ತಿದ್ದರೂ ಕೂಡಾ ನಾನು ಇನ್ನೂ ಕೂಡಾ ಅರ್ಜಿದಾರರೊಂದಿಗೆ ಇದ್ದೇನೆ ಎಂದದು ತೋರಿಸಲು ಸುಮ್ಮನೆ ಮೆಸೇಜ್ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಒಂದು ಹೆಣ್ಣಿಗೆ ಗಂಡು ಸಂಸಾರ ಮಾಡಲು ಸಹಕಾರ ನೀಡದಿದ್ದರೆ ಅದೂ ಕೂಡಾ ಮಾನಸಿಕ ಹಿಂಸೆಯಾಗುತ್ತದೆ ಎಂದರೆ ಗೊತ್ತಿಲ್ಲ.

ರತ್ನಾಕರ್ ರವರು ನನ್ನ ಹೆಂಡತಿ ಮನೆ ಬಿಟ್ಟು ಹೋದ ಅದೇ ರೀತಿ ಫೋನ್ ಮಾಡಿರುತ್ತಾರೆ. ರತ್ನಾಕರ್ ರವರು ಅರ್ಜಿದಾರರು ತಾಯಿಯ ಮನೆಯಲ್ಲಿದ್ದಾರೆ ಎಂದು ಅದೇ ದಿನ ಹೇಳಿರುತ್ತಾರೆ. ಅರ್ಜಿದಾರರು ತಾಯಿಯ ಮನೆ ಬಿಟ್ಟು ಬರುವುದಿಲ್ಲ ಎಂದು ಗೊತ್ತಾದಾಗ ನಾನು ಅವರನ್ನು ಮನೆಗೆ ಕರೆದುಕೊಂಡು ಹೋಗಲು ಪ್ರಯತ್ನಿಸಿರುತ್ತೇನೆ ಮತ್ತು ಯಾವ ಕಾರಣಕ್ಕೆ ಮನೆ ಬಿಟ್ಟು ಹೋಗಿದ್ದರು ಎಂದು ಪ್ರಶ್ನೆ ಮಾಡಿರುತ್ತೇನೆ. ಕಾರಣ ಹೇಳಿರುವುದಿಲ್ಲ. 2013 ರಿಂದ 2018 ರವರೆಗೆ ನನಗೆ ಬುದ್ಧಿಯನ್ನು ಸರಿಪಡಿಸಿಕೊಳ್ಳಲು ಅವಕಾಶ ಕೊಟ್ಟರೂ ಸಹ ಸಹಬಾಳ್ವೆ ಮಾಡಲು ನಾನು ತಯಾರಿಲ್ಲದಿದ್ದರಿಂದ ಅವರು ಮನೆ ಬಿಟ್ಟು ಬಂದಿರುತ್ತಾರೆ ಎಂದರೆ ಸರಿಯಲ್ಲ. ಚೇತನ್ ಕುಮಾರ್ ಮದುವೆಗೆ ನನ್ನನ್ನು ಕರೆಯದೇ, ನನ್ನ ತಾಯಿಯನ್ನು ಮಾತ್ರ ಯಾಕೆ ಕರೆದದ್ದು ಎಂದು ನಾನು ಕೇಳಿರುವುದಿಲ್ಲ. ನಮ್ಮ ಕುಟುಂಬದ ಮೇಲೆ ಅಸಮಾಧಾನವಿದ್ದಿದ್ದರೆ ನನ್ನ ತಾಯಿಯನ್ನು ಮದುವೆಗೆ ಕರೆಯುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಿವಾಹವಾಗಿ ನಾನು ನನ್ನ

ಹೆಂಡತಿಗೆ ಆಗಬೇಕಾದ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ ಎಂಬುದನ್ನು ಬಿಟ್ಟು ಅರ್ಜಿದಾರರಿಗೆ ಬೇರೆ ಯಾವುದೇ ತಕರಾರು ಇಲ್ಲ ಎಂದರೆ ಗೊತ್ತಿಲ್ಲ. ನಾನು ತಿಂಗಳಿಗೆ 1 ಸಾರಿ ಅಥವಾ 2 ಸಾರಿ ಮಂಗಳೂರಿಗೆ ಬಂದು ಹೋಗುತ್ತಿದ್ದೆ. ನಾನು ಹೇಳುತ್ತಿರುವ ಎಲ್ಲಾ ವಿಚಾರ ಸುಳ್ಳು, ನಾನು 2 ತಿಂಗಳಿಗೊಮ್ಮೆ ಮಂಗಳೂರಿಗೆ ಬರುತ್ತಿದ್ದೆ ಎಂದರೆ ಸರಿಯಲ್ಲ. ಆ ಸಂಬಂಧ ಟ್ರೇನ್ ಟಿಕೇಟ್ ಗಳನ್ನು ಹಾಜರುಪಡಿಸಬಹುದಾ ಎಂದರೆ ಇದ್ದರೆ ತರುತ್ತೇನೆ ಎನ್ನುತ್ತಾರೆ.

ಪ್ರೇಮಲತಾ ಮದುವೆಗೆ ಬಂದ ನಾನು 2 ದಿನ ಇದೆ. ನಂತರ ಬೆಂಗಳೂರಿಗೆ ಹೋಗಿ ಫೆಬ್ರವರಿಯಲ್ಲಿ 9 ನೇ ತಾರೀಖು ಬಂದಿರುತ್ತೇನೆ. ದಿಃ09.02.2019 ರಂದು ನಾನು ಅರ್ಜಿದಾರರ ಹುಟ್ಟು ಹಬ್ಬ ಆಚರಿಸಲು ಬಂದಿದ್ದೆ, ಅದಕ್ಕೆ ನಾನು ಗಿಫ್ಟ್ ತಂದಿದ್ದೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. 2019 ರಿಂದ 2024 ರವರೆಗೆ ನನ್ನ ಅರ್ಜಿ ಸಲ್ಲಿಕೆಯಾದ ನಂತರ ಬೇರೆಯವರು ಗೌರ್ ಮೆಂಟ್ ಪ್ಲೀಡರ್ ಗಳಾಗಿರುತ್ತಾರೆ ಎಂದರೆ ಸರಿ. ಸದರಿ ವಿಚಾರವನ್ನು ಉಪಯೋಗಿಸಿಕೊಂಡು ನಾನು ನನ್ನ ಹೆಂಡತಿ ಊರಿಗೆ ಬಂದು ಇಲ್ಲಿಯೇ ವಕೀಲೆ ವೃತ್ತಿ ಮಾಡುವಂತೆ ಕೇಳಿಕೊಂಡರೂ ಕೂಡಾ ಬರದೇ ಬೆಂಗಳೂರಿನಲ್ಲಿಯೇ ಉಳಿದು ಮಾನಸಿಕ ಹಿಂಸೆ ನೀಡಿರುತ್ತೇನೆ ಎಂದರೆ ಸರಿಯಲ್ಲ. 2019 ರ ನನಗೂ ಮತ್ತು ನನ್ನ ಹೆಂಡತಿ, ನನ್ನ ಹೆಂಡತಿ ಮತ್ತು ನನ್ನ ಕುಟುಂಬಕ್ಕೂ ಯಾವುದೇ ಸಂಬಂಧ ಇಲ್ಲ ಎಂದು ಹೇಳಿರುತ್ತೇನೆಯೇ ಎಂದರೆ ಕುಟುಂಬಗಳ ಮಧ್ಯೆ ಇಲ್ಲ ಎನ್ನುತ್ತಾರೆ. ದಿಃ25.01.2020 ರ ಅನುಪ್ ಕುಮಾರ್ ರವರ ವಿವಾಹ ಕಾರ್ಯಕ್ರಮಕ್ಕೂ ಅರ್ಜಿದಾರರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅನುಪ್ ಕುಮಾರ್ ರವರು ಅರ್ಜಿದಾರರ ಚಿಕ್ಕಮ್ಮನ ಮಗ. 2019 ರ ನಂತರ ಅರ್ಜಿದಾರರ ಕುಟುಂಬದ ಯಾವುದೇ ಕಾರ್ಯಕ್ರಮಕ್ಕೆ ನನ್ನನ್ನು, ನನ್ನ ಕುಟುಂಬದವರನ್ನು ಕರೆದಿರುವುದಿಲ್ಲ ಎಂದರೆ ಸರಿ.

ದಿಃ06.02.2022 ರಂದು ಮೊದಲನೇ ಬಾರಿಗೆ ನಾವೆಲ್ಲರೂ ಮುಖತಃ ಕುಳಿತು ಮಾತನಾಡಿರುತ್ತೇವೆ, ಅಲ್ಲಿಯವರೆಗೂ ನಾವು ಫೋನ್ ನಲ್ಲಿಯೇ ಮಾತನಾಡಿರುತ್ತೇವೆ.

ವಿವಾಹವಾದ ಸ್ವಲ್ಪ ದಿನದ ನಂತರ ನಾನು ನನ್ನ ಹೆಂಡತಿಯನ್ನು ತೊರೆಯಬೇಕೆಂಬ ಉದ್ದೇಶದಿಂದಲೇ ನಾನು ಅವರಿಗೆ ಅನಾರೋಗ್ಯವಿದ್ದಾಗ ಬೆಂಗಳೂರಿನಿಂದ ಬರದೇ ಇದ್ದು, ಅವರಿಗೆ ನನ್ನ ಬೆಂಗಳೂರಿನ ವಿಳಾಸ ತಿಳಿಸಿದೇ ಇದ್ದು, ಅವರನ್ನು ಇಂಟರ್ ಡಿಸ್ಟಿಕ್ ಟ್ರಾನ್ಸಪರ್ ಮಾಡದೇ ಇದ್ದು, ಎಲ್ಲಾ ರೀತಿಯಿಂದ ನಾನು ಅವರಿಗೆ ಮಾನಸಿಕ ಹಿಂಸೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ವೈವಾಹಿಕ ಕಲಹವನ್ನು ಸರಿ ಮಾಡಲು ಅರ್ಜಿದಾರರ ಮನೆಯವರೇ ಪ್ರಯತ್ನಿಸಿದ್ದು, ನಮ್ಮ ಕುಟುಂಬದವರು ಯಾವುದೇ ರೀತಿ ಪ್ರಯತ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾಣಿ ನಿಶ್ಚಲ್ ಕುಮಾರ್, ನನ್ನ ಹೆಂಡತಿಯ ಕಡೆಯವರು ಎಂದರೆ ಸರಿ. ನಮ್ಮ ಕಡೆಯಿಂದ ಪಂಚಾಯ್ತಿ ಮಾಡಲು ನಾನೇ ಬಿಟ್ಟಿರುವುದಿಲ್ಲ, ನನಗೆ ಹೆಂಡತಿಯ ಜೊತೆ ಸಂಸಾರ ಮಾಡಲು ಯಾವುದೇ ಉದ್ದೇಶವಿರಲಿಲ್ಲ ಎಂದರೆ ಸರಿಯಲ್ಲ. 2013 ರಿಂದ 2017 ರವರೆಗೆ ನನ್ನ ಹೆಂಡತಿ ನಮ್ಮ ಮನೆಯಿಂದಲೇ ಕರ್ತವ್ಯಕ್ಕೆ ಹೋಗುತ್ತಿದುದ್ದರಿಂದ ನಾನು ವರ್ಷಕ್ಕೆ ಕೇವಲ 6 ಬಾರಿ ಮಾತ್ರ ಬರುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಹೆಂಡತಿಗೆ ಮಾನಸಿಕವಾಗಿ ಇದರಿಂದ ಆಘಾತವಾಗಿದೆ ಎಂದರೆ ಸರಿಯಲ್ಲ. ನಾನು ಅರ್ಜಿದಾರರ ಜೊತೆ ಸಹಬಾಳ್ವೆ ಮಾಡಲು ನನಗೆ ಯಾವುದೇ ಇಚ್ಛೆ ಇಲ್ಲದೇ ಇರದಿರುವುದರಿಂದ ಈಗ ನನಗೆ ಆ ಹಕ್ಕು ಕೂಡಾ ಇಲ್ಲ ಎಂದರೆ ಸರಿಯಲ್ಲ. ಸದರಿ ಕೌಂಟರ್ ಕ್ಲೇಮ್ ನ್ನು ನಾನು ಅರ್ಜಿದಾರರಿಗೆ ಹಿಂಸೆ ಕೊಡಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಬೆಂಗಳೂರಿನಿಂದ ನಾನು ಊರಿಗೆ ಬಂದಾಗಲೂ ಕೂಡಾ ನಾನು ಅರ್ಜಿದಾರರೊಂದಿಗೆ ಸರಿಯಾಗಿ ಮಾತನಾಡದೇ ನನ್ನಷ್ಟಕ್ಕೆ ನಾನೇ ಇರುತ್ತಿದ್ದೆ ಎಂದರೆ ಸರಿಯಲ್ಲ. ಯಾವುದೇ ಸಕಾರಣವಿಲ್ಲದೇ ಅರ್ಜಿದಾರರನ್ನು ತಿರಸ್ಕರಿಸಿದ್ದರಿಂದ ವಿವಾಹ ಮರುಸ್ಥಾಪನೆ ಕೇಳುವ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಮಾನಸಿಕ ಕಿರುಕುಳ ಹಾಗು ಡಿಸರ್ಸನ್ ಮಾಡಿರುವುದರಿಂದ ನನ್ನ ಹೆಂಡತಿ ವಿಚ್ಛೇದನ ಪಡೆಯಲು ಅರ್ಹರು ಎಂದರೆ ಡಿಸರ್ಸನ್ ಮಾಡಿಲ್ಲ

ಎನ್ನುತ್ತಾರೆ. ನನ್ನ ಜೊತೆ ಇರುವಾಗ ಅರ್ಜಿದಾರರನ್ನು ಸರಿಯಾಗಿ ನೋಡದೇ, ಈಗಲೂ ಕರೆದುಕೊಂಡು ಹೋಗುತ್ತೇನೆ ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

ನನ್ನ ಉಕ್ತಲೇಖನದ ರೀತ್ಯಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಪುತ್ತೂರು